ಸಮಿತಿಯವರು ಕಳೆದ ಹತ್ತಾರು ವರ್ಷಗಳ ಕೆಳಗಡೆ ಹೋರಾಟವನ್ನು ನಡೆಸಿದರು. ಈ ಹೋರಾಟದ ಸಂದರ್ಭದಲ್ಲಿ ಕೇರಳದಲ್ಲಿ ಇಬ್ಬರು ಶಾಂತರಾಮಶೆಣೈ, ಸುಧಾಕರ್ ಅಗ್ನಿತಾಯ ಹುತಾತ್ಮರಾಗಿದ್ದರು. ಕರ್ನಾಟಕಕ್ಕೆ ಕಾಸರಗೋಡು ತಾಲ್ಲೂಕು ವಿಲೀನೀಕರಣ ಆಗಬೇಕೆಂಬ ಒತ್ತಾಯವನ್ನು ಈ ಸದನದಲ್ಲಿ ಬಹಳಷ್ಟು ಸಾರಿ ನಾವು ಮಾಡಿದ್ದೇವೆ. ಈ ಕಾಸರಗೋಡು ಕರ್ನಾಟಕಕ್ಕೆ ವಿಲೀನಕರಣಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಲ್ಲಿ, ಮಹಾರಾಷ್ಟ್ರ ಸರ್ಕಾರ ಏನು ಹುತಾತ್ಮರಾದ 70 ಜನರಿಗೆ ಮಾಸಾಶನ ಕೊಡುವ ದೃಷ್ಟಿಯಲ್ಲಿ ಆ ಇಬ್ಬರು ವಿದ್ಯಾರ್ಥಿಗಳು ಏನು ಹುತಾತ್ಮರಾಗಿದ್ದಾರೆ. ಅವರ ಕುಟುಂಬಕ್ಕೆ ಕರ್ನಾಟಕ ಸರ್ಕಾರ ಈಗ ಒಂದು ಸಾವಿರ ರೂಪಾಯಿಗಳಂತೆ ಮಹಾರಾಷ್ಟ್ರ ಸರ್ಕಾರ ಏನು ಘೋಷಣೆ ಮಾಡಿದ್ದಾರೆ, ಆ ರೀತಿಯ ಸಂಭಾವನೆಯನ್ನು ಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಕಳೆದ ಮಾರ್ಚಿ ತಿಂಗಳ 2ನೇ ತಾರಿಖಿನಂದು ಕಾಸರಗೋಡಿನಲ್ಲಿ ಸಮ್ಮೇಳನವಾಯಿತು. ಆಗ ಅಲ್ಲಿ ಮಾನ್ಯ ನಾಣಯ್ಯನವರು ಪ್ರತಿನಿಧಿಸಿದ್ದರು. ನಾನು ಕೂಡ ಆ ಸಮ್ಮೇಳನಲ್ಲಿ ಭಾಗವಹಿಸಿದ್ದೆ, ಆ ಸಂದರ್ಭದಲ್ಲಿ ಮಾನ್ಯ ನಾಣಯ್ಯನವರು ನಾವು ಬೆಳಗಾಂ ಚಳುವಳಿಯ ಬಗ್ಗೆ ಕಾಸರಗೋಡನ್ನು ಬಹಳಷ್ಟು ದೂರಪಿಟ್ಟಿದ್ದೇವೆಂದು ಹೇಳಿದರು. ಈ ಕಾಸರಗೋಡು ಖಂಡಿತವಾಗಿಯೂ ಕರ್ನಾಟಕಕ್ಕೆ ಬರಬೇಕು, ನಮ್ಮ ಹಕ್ಕು, ಒತ್ತಾಯ ಮಾಡುತ್ತಿರುವಂತಹ ಸಂದರ್ಭದಲ್ಲಿ ತಾವು ಕಾಸರಗೋಡಿನ ಆ ಚಳುವಳಿಗೆ ಬೆಂಬಲವನ್ನು ಕೊಡಬೇಕು ಮತ್ತು ಈ ಇಬ್ಬರು ಹುತಾತ್ಮರಿಗೆ ಪರಿಹಾರ ಕೊಡಬೇಕು ಮತ್ತು ಈ ಕಾಸರಗೋಡು ಕರ್ನಾಟಕ ರಾಜ್ಯಕ್ಕೆ ಸೇರಬೇಕೆಂಬ ಒತ್ತಾಯದ ಬಗ್ಗೆ ಈ ಸರ್ಕಾರ, ಸದನ ಬಹಳಷ್ಟು ಚುರುಕಾಗಿ ಕೆಲಸ ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಗಡಿ ಭಾಗದಲ್ಲಿ ಇರುವಂತಹ ಕಾಸರಗೋಡು ಇರಬಹುದು, ಮಹಾರಾಷ್ಟ್ರದ ಗಡಿ ಇರಬಹುದು, ತಮಿಳುನಾಡಿನ ಗಡಿ ಇರಬಹುದು, ಈ ಸ್ವಾತಂತ್ರ್ಯ ಹಬ್ಬದ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರದವರು ಯಾವ ರೀತಿಯಾಗಿ ತೀರ್ಮಾನ ತೆಗೆದುಕೊಂಡಿದ್ದಾರೆ ಹಾಗೂ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಪರಿಹಾರ ಕೊಡುವಂತಹ, ಮಾಸಾಶನ ಕೊಡಬೇಕೆನ್ನುವುದರ ಬಗ್ಗೆ ನಾನು ಈಗಾಗಲೇ ಯೋಚನೆ ಮಾಡುತ್ತಿದ್ದೇನೆ. ನಾನು ಎಲ್ಲಾ ಪರಿಪೂರ್ಣವಾದ ಮಾಹಿತಿಯನ್ನು ಸಂಬಂಧಪಟ್ಟವರಿಂದ ತರಿಸಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

(ಏ) ಅಬಕಾರಿ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ನಷ್ಟ

ಶ್ರೀ ಎಸ್.ಎಂ.ನಾಗರಾಜು (ತರೀಕೆರೆ): ಮಾನ್ಯ ಅಧ್ಯಕ್ಷರೆ, ಅಬಕಾರಿ ಇಲಾಖೆಯಿಂದ ರಾಜ್ಯಸರ್ಕಾರಕ್ಕೆ ಆಗುತ್ತಿರುವಂತಹ ನಷ್ಟದ ಬಗ್ಗೆ ಹಿಂದೆ ಎಲ್ಲಾ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸರ್ಕಾರದಿಂದ ನಮಗೆ ಹೆಚ್ಚಿನ ಆದಾಯ ಬರುತ್ತಿದೆನ್ನುವಂತಹ

ಉತ್ತರವನ್ನು ಕೊಡುತ್ತಿದ್ದುದನ್ನು ನಾವು ಕೇಳುತ್ತಿದ್ದೆವು. ಆದರೆ ನನ್ನ ಕ್ಷೇತ್ರದಲ್ಲಿ ದಿನಾಂಕ: 27-7-97ರಂದು ಸುಮಾರು ನಾಲ್ಕು ಲಾರಿಗಳು, ಲೈಲ್ಯಾಂಡ್ ಲಾರಿಗಳಲ್ಲಿ ಸಾಗಿಸುತ್ತಿದ್ದಂತಹ ಮದ್ಯವನ್ನು ಅರಣ್ಯ ಇಲಾಖೆಯವರು ಹಿಡಿದು ಕೇಸ್ ದಾಖಲು ಮಾಡಿದ್ದಾರೆ. ಈ ಲಾರಿಗಳು ಬಂದಂತಹ ಇನ್‌ವಾಯ್ಸ್‌ನಲ್ಲಿ ಮದ್ರಾಸ್‌ನಿಂದ ಮಹಾರಾಷ್ಟ್ರಕ್ಕೆ ಹೋಗುವಂತಹ ಕೆಮಿಕಲ್ಸ್ ಬಾಕ್ಸ್ ಇಟ್ಟುಕೊಂಡು ಹೋಗುತ್ತಿದ್ದೇವೆಂದು ಇತ್ತು. ಈ ನಾಲ್ಕು ಲಾರಿಗಳು ಸಹ ಕರ್ನಾಟಕ ರಾಜ್ಯದ್ದೇ ಆಗಿರುತ್ತದೆ. ಅವುಗಳ ನಂಬರ್ ಸಿಎಎಸ್ 2161, ಕೆ ಎ 1263, ಕೆಎ 05 ಬಿ 5040, ಕೆಎ 05 ಬಿ 9369 ಹಾಗೂ ಮತ್ತೊಂದು ಲಾರಿ ಹೀಗೆ ಅಬಕಾರಿ ದೊರೆಗಳಿಂದ ಉತ್ಪತ್ತಿಯಾದಂತಹ ಮದ್ಯವನ್ನು ಸಾಗಿಸುವಂತಹ ಕೆಲಸ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಇದರ ಬಗ್ಗೆ ಈಗಾಗಲೇ ಅರಣ್ಯ ಇಲಾಖೆಯವರು ಪೋಲೀಸ್‌ನವರ ನೆರವಿನಿಂದ ಲಾರಿಗಳನ್ನು ಹಿಡಿದು ಕೇಸ್ ಅನ್ನು ಬುಕ್ ಮಾಡಿದ್ದಾರೆ. ಇದನ್ನು ಬುಕ್ ಮಾಡಿದ ಮೇಲೆ ಮುಂದಿನ ಕ್ರಮ ಏನು ತೆಗೆದುಕೊಂಡಿದ್ದಾರೆಂಬುದು ಗೊತ್ತಿಲ್ಲ. ಇದರ ಜೊತೆಗೆ ಈ ಲಾರಿಗಳ ಬುಕ್ಕಿಂಗ್ ಆಫೀಸ್ ಏನು ಇದೆ, ಅವರು ಬೋಗಸ್ ಇನ್‌ವಾಯಸ್ ಅನ್ನು ಮಾಡಿ ಇದು ಮದ್ರಾಸ್‌ನಿಂದ ಮಹಾರಾಷ್ಟ್ರಕ್ಕೆ ಹೋಗುವಂತಹ ಕೆಮಿಕಲ್ಸ್ ಬಾಕ್ಸ್ ಎಂದು ಹೇಳಿ ಸೃಷ್ಟಿ ಮಾಡಿರುತ್ತಾರೆ. ಆದರೆ ಅದನ್ನು ತೆಗೆದು ನೋಡಿದರೆ ಅದರಲ್ಲಿ 'ರಮ್' ಇದೆ. ಈ ರೀತಿಯಾಗಿ ಸರ್ಕಾರಕ್ಕೆ ವಂಚನೆ ಮಾಡಿಕೊಂಡು ಕಳುಹಿಸುವಂಥಾದ್ದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಇದರ ಹಿಂದೆ ಯಾರು ಇದ್ದಾರೆ ಅವರು ಶ್ರೀಮಂತರು, ಡಿಸ್ಟಿಲರಿಗಳಿರಬಹುದು, ಅವರ ಬಗ್ಗೆ ಉಗ್ರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಜೊತೆಗೆ ಈ ಬೋಗಸ್ ಇನ್‌ವಾಯ್ಸ್ ಏನು ಸೃಷ್ಟಿ ಮಾಡಿದ್ದಾರೆ, ಅವರನ್ನೂ ಸಹ ಶಿಕ್ಷೆಗೆ ಗುರಿ ಮಾಡಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಮಾಹಿತಿಯನ್ನು ತರಿಸಿ ಅವರಿಗೆ ಉತ್ತರವನ್ನು ಕೊಡುತ್ತೇನೆ.

(ಐ) 1996-97ನೇ ಸಾಲಿಗೆ ಸಾರಾಯಿ ಹರಾಜು ಆಗದಿರುವುದು.

ಶ್ರೀ ವೈಜನಾಥ್ ಮಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೆ, 1996-97ನೇ ವರ್ಷಕ್ಕೆ ಸುಮಾರು ನಾಲ್ಕೈದು ತಿಂಗಳುಗಳು ಎಕ್ಸೈಜ್ ಆಕ್ಷನ್ ಆಗಿದೆ, ಅರ್ಯಾಕ್ ಆಕ್ಷನ್ ಆಗಿಲ್ಲ. ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆಂದರೆ 2-3 ವರ್ಷಗಳಿಂದ ಇಲ್ಲ, ಹೊಸ ಎಕ್ಸೈಜ್ ಪಾಲಿಸಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಪ್ರತಿ ವರ್ಷ ಎಕ್ಸೈಜ್ ಪಾಲಿಸಿಯನ್ನು ಮಾಡುವುದೆಂದರೆ ಬರೀ ಎಕ್ಸೈಜ್ ಕಂಟ್ರಾಕ್ಟರ್‌ದಾರರಿಗೆ ಲಾಭ